

ಅವನು ಭಾವಿಸಿದ.

ಅವರಲ್ಲಿ ಹಿರಿಯ ಮುದುಕಪ್ಪ ಏನೋ ಮಾತಾಡಬೇಕೆಂದು ಬಾಯಿ ತೆರೆಯುವಷ್ಟರಲ್ಲಿ ಚಿಕ್ಕಪ್ಪ, 'ನನಗೂ ನಿಮ್ಮ ಪರಿಚಯ ಸಿಕ್ಕಿಲ್ಲ. ನಾನು ಇವನ ತಾಯಿಯ ಗಂಡ. ಬ್ರಿಟಿಷ್ ಮಿಲಿಟರಿಯಲ್ಲಿದ್ದೆ. ಈಗ ರಿಟೇರಾಗಿ ಮನೇಲಿದ್ದೇನೆ' ಎಂದು ಅಗತ್ಯವಿರದಿದ್ದರೂ ಪರಿಚಯ ಹೇಳಿಕೊಂಡರು.

ವೃದ್ಧರಿಬ್ಬರು ಚಿಕ್ಕಪ್ಪನನ್ನೇ ದಿಟ್ಟಿಸಿದರು. ಬಳಿಕ ತಾಯಿಯತ್ತ ನೋಟ ಹರಿಸಿದರು. ಅವರು ಇನ್ನೂ ಮಾತಾಡದಿರುವುದನ್ನು ಕಂಡು ಅವನೆಂದ: 'ನಿಮ್ಮ ಮಕ್ಕಳು ಏನಾದರೂ ತಪ್ಪು ಮಾಡಿದ್ದರೆ ಅಥವಾ ಕಲಿಯಲು ದಡ್ಡರಾಗಿದ್ದರೆ ಸಂಕೋಚ ಪಡಬೇಡಿ. ಕಲಿಯಲು ಹಿಂದುಳಿದವರು ಎಂದಾದರೆ ಅಂಥವರಿಗಾಗಿಯೇ ಫ್ರೀ ಕೋಚಿಂಗ್ ಕ್ಲಾಸ್ ನಡೆಸುತ್ತಿದ್ದೇನೆ, ಅದಕ್ಕೆ ಸೇರಿಕೊಳ್ಳಲಿ. ಇನ್ನು ಏನಾದರೂ ತಪ್ಪು ಮಾಡಿದವರೆಂದಾದರೆ ಕರೆದು ಬುದ್ಧಿವಾದ ಹೇಳುತ್ತೇನೆ. ವಿದ್ಯಾರ್ಥಿಗಳು ತಂದೆ ತಾಯಿಯರ ಮಾತಿಗಿಂತ ಅಧ್ಯಾಪಕರ ಮಾತಿಗೆ ಹೆಚ್ಚು ಬೆಲೆ ಕೊಡುತ್ತಾರೆ. ಸಂಕೋಚವಿಲ್ಲದೆ ಹೇಳಿ. ನಿಮ್ಮ ಮಗನೋ, ಮಗಳೋ ಯಾರು? ಇಷ್ಟಕ್ಕೂ ನೀವಿಬ್ಬರು ಯಾರು?'

ಕಿರಿಯ ಮುದುಕಪ್ಪ ತಕ್ಷಣ ಉತ್ತರಿಸಿದ.

'ನಾನು ನಿನ್ನ ಅಪ್ಪ'.

ವಾತಾವರಣ ಇನ್ನಷ್ಟು ಬಿಸಿ ಏರಿತು. ಅವನು ಕಿರಿಯ ಮುದುಕಪ್ಪನನ್ನು ಪರೀಕ್ಷಾರ್ಥಕ ದೃಷ್ಟಿಯಿಂದ ನೋಡಿದ. ಕಿರಿಯ ಮುದುಕಪ್ಪ ತಲೆ ಕೆಟ್ಟವನಂತೇನು ಕಾಣಲಿಲ್ಲ.

ಅವನಿಗೆ ನಖಶಿಖಾಂತ ಉರಿದುಹೋಯಿತು.

'ಹಾಗೆ ಹೇಳಲು ನಿಮಗೆಷ್ಟು ಧೈರ್ಯ? ಈ ಚಿಕ್ಕಪ್ಪನೇ ನನ್ನ ಅಪ್ಪ ಎಂದು ಎಲ್ಲರೂ ಭಾವಿಸಿದ್ದಾರೆ'.

ಹಿರಿಯ ಮುದುಕಪ್ಪ ಸಮಜಾಯಿಸಿದ.

'ನಾನು ಇವನ ಅಣ್ಣ. ನನ್ನ ತಮ್ಮ ಹೇಳಿದ್ದು ನಿಜ. ಇವನೇ ನಿನ್ನ ನಿಜವಾದ ಅಪ್ಪ'.

ಅವನು ಕಣ್ಣೆ ಉಜ್ಜಿಕೊಂಡ.

ಎಳವೆಯ ದಿನಗಳು ಅವನ ಮನೋಪಟಲದಲ್ಲಿ ಮೂಡಿದವು.

ಅವನು ಅಜ್ಜನ ಮನೆಯಲ್ಲಿ ಬೆಳೆದಿದ್ದ. ಮನೆಯಲ್ಲಿ ಅಜ್ಜ–ಅಜ್ಜಿ ಇದ್ದರು. ತಾಯಿ ಇದ್ದರು. ಮಾವಂದಿರು, ಚಿಕ್ಕಮ್ಮಂದಿರು ಇದ್ದರು. ಆದರೆ ಅಪ್ಪ ಇರಲಿಲ್ಲ.

'ನನ್ನ ಅಪ್ಪ ಯಾರಮ್ಮ?'

ತಾಯಿ ಉತ್ತರಿಸಲಿಲ್ಲ. ಅಜ್ಜಿ ಹೇಳಿದರು.

'ಅವನೊಬ್ಬ ಅಯೋಗ್ಯ. ಶತಮೂರ್ಖ. ಅವನ ಹೆಸರು ಹೇಳಲಿಕ್ಕೇ ಹೇಸಿಗೆಯಾಗುತ್ತಿದೆ. ನಿನ್ನ ತಾಯಿ ಮೂರು ತಿಂಗಳ ಬಸುರಿಯಾಗಿದ್ದಾಗ ಈ ಮನೆಯಲ್ಲಿ ಬಿಟ್ಟು ಹೋದವನು ಆ ಬಳಿಕ ಬರಲಿಲ್ಲ. ತಾಯಿ ನಿನ್ನನ್ನು ಹೆತ್ತಮೇಲೆ ಗಂಡು ಮಗು ಎಂದು ಹೇಳಿ ಕಳಿಸಿದೆವು. ಅವನು ಇಣುಕಿ ನೋಡಲಿಲ್ಲ. ನಾಲ್ಕು ವರ್ಷವಾಯಿತು ನಿನಗೆ. ಇವಳನ್ನು ಬಿಡು, ನಿನ್ನನ್ನು ನೋಡಲಿಕ್ಕಾದರೂ ಬರಬೇಕಿತ್ತಲ್ಲಾ? ಅವನಿಗೆ ನೀವಿಬ್ಬರು ಬೇಡವಂತೆ. ಇನ್ನು ನಿನಗೆ ಅಂಥಾ ಅಪ್ಪ ಯಾಕೆ ಬೇಕು?'

ನಾಲ್ಕರ ಹುಡುಗ ತಾಯಿಯನ್ನು ನೋಡಿದ. ಅವರ ಕಣ್ಣಲ್ಲಿ ನೀರಿತ್ತು. ಅವರು ಅವನ ತಲೆ ನೇವರಿಸಿ 'ನಿನ್ನ ಅಪ್ಪನ ಬಗ್ಗೆ ಯಾವ ಕನಸೂ ಇಟ್ಟುಕೊಳ್ಳಬೇಡ. ಅವರಿಗೆ ಬೇರೆ ಮದುವೆಯಾಗಿದೆ. ಮಕ್ಕಳೂ ಆಗಿದೆಯೆಂದು ಸುದ್ದಿ. ಅವರ ಆಸೆ ಬಿಟ್ಟು ಬಿಡು'.

ಅವನ ಮುಖ ಬಾಡಿತು.

ಅದನ್ನು ನೋಡಿ ಅಜ್ಜ ಸಂತೈಸಿದರು.

'ನಿನ್ನ ಮಾವಂದಿರು, ಚಿಕ್ಕಮ್ಮಂದಿರು ನನ್ನನ್ನು ಅಪ್ಪ ಎಂದು ಕರೆಯುವುದಿಲ್ಲವೇ? ನೀನೂ ಕರೆದುಬಿಡು'.

ಅವನು ಹಾಗೇ ಕರೆಯುತ್ತಿದ್ದ. ಜಾತ್ರೆಗೋ, ಯಕ್ಷಗಾನಕ್ಕೋ ಹೋಗುವಾಗ ಮಾವಂದಿರು ಅವನನ್ನು ಭುಜದ ಮೇಲಿರಿಸಿ ಹೊತ್ತುಕೊಂಡೇ ಹೋಗುತ್ತಿದ್ದರು. ತಾಯಿ ಕಣ್ಣೀರು ಹಾಕುತ್ತಿದ್ದರು.

'ನಿನ್ನ ಅಪ್ಪ ಇರುತ್ತಿದ್ದರೆ ನನ್ನ ತಮ್ಮಂದಿರಿಗೆ ನೀನು ಭಾರವಾಗುತ್ತಿರಲಿಲ್ಲ'.

ಆಗ ಅವನಿಗೆ ಅಪ್ಪ ಬೇಕೆಂದಾಗುತ್ತಿತ್ತು.

ಅಂತಹ ದಿನಗಳಲ್ಲಿ 'ಅವರು' ಕಾಣಿಸಿಕೊಂಡಿದ್ದರು.

'ಅವರು' ಸಂಜೆ ಬಂದು ತಾಯಿಯೊಡನೆ ಗಂಟೆಗಟ್ಟಲೆ ಮಾತಾಡುತ್ತಿದ್ದರು. ರಾತ್ರಿ ನಿಲ್ಲುತ್ತಿರಲಿಲ್ಲ. 'ಅವರು' ಅವನನ್ನ 'ಪಟೇಲರೇ' ಎಂದು ಕರೆಯುತ್ತಿದ್ದರು. ಪೆಪ್ಪರುಮಿಂಟು, ಮಿಠಾಯಿ ತಿನ್ನಲು ಹಣ ಕೊಡುತ್ತಿದ್ದರು. ಸದಾ ನಗುನಗುತ್ತಾ ಮಾತಾಡಿಸುತ್ತಿದ್ದರು. ತೊಡೆಯ ಮೇಲೆ ಕೂರಿಸಿ ಕತೆ ಹೇಳುತ್ತಿದ್ದರು.

'ಅದು ಯುದ್ಧದ ಸಮಯ. ನಾನು ನಮ್ಮ ಇಂಡಿಯನ್ ಆರ್ಮಿಯಲ್ಲಿ ಟ್ರಕ್ಕು ಡ್ರೈವರ್ ಆಗಿದ್ದೆ. ನಮ್ಮ ಆರ್ಮಿ ಜಪಾನಿನ ಮತ್ತು ಸುಭಾಷ್ಚಂದ್ರ ಬೋಸರ ಸೇನೆಗಳನ್ನು ಹಿಮ್ಮೆಟ್ಟಿಸಿ ಮಲೇಷ್ಯಾವರೆಗೆ ಹೋಯಿತು. ಅಲ್ಲಿ ಲ್ಯಾಂಡ್ ಮೈನ್ಸಿಗೆ ಸಿಕ್ಕಿ ನನ್ನ ಟ್ರಕ್ಕು ಚೂರು ಚೂರಾಯಿತು. ನಾನು ಅದು ಹೇಗೋ ನಮ್ಮ 'ಪಟೇಲ'ನನ್ನು ನೋಡಲೆಂದು ಬದುಕುಳಿದೆ. ಅದು ರಣಕಾಡು. ಅಲ್ಲಿಂದ ಹರಿದಾಡಿಕೊಂಡು ಪುಟ್ಟ ಪಟ್ಟಣವೊಂದಕ್ಕೆ ಬಂದೆ. ಅಲ್ಲಿನ ಭಾಷೆ ಬೇರೆಯೆ. ಯಾರು ಏನು ಕೇಳಿದರೂ 'ಇಂಡಿಯನ್ ಆರ್ಮಿ' ಎಂದೆ. ಅಲ್ಲಿದ್ದ ತಮಿಳರು ನನಗೆ ಉಣ್ಣಲು, ತಿನ್ನಲು ಕೊಟ್ಟು ಕೌಲಾಲಂಪುರಕ್ಕೆ ಕಳಿಸಿಕೊಟ್ಟರು. ಅಲ್ಲಿ ನಮ್ಮ ಆರ್ಮಿಯ ಕ್ಯಾಂಪು ಇತ್ತು. ಮೇಜರನೊಡನೆ ಹಿಂದಿಯಲ್ಲಿ ಮಾತಾಡಿ ನಡೆದ ಸಂಗತಿ ಎಲ್ಲಾ ತಿಳಿಸಿದೆ. ಅವನು ಇಂಡಿಯನ್ ಆರ್ಮಿಯೊಡನೆ ನನ್ನನ್ನು ನಮ್ಮ ದೇಶಕ್ಕೆ ಕಳುಹಿಸಿಕೊಟ್ಟ'.

'ಮತ್ತೇನಾಯಿತು?'

'ಯುದ್ಧ ಮುಗಿದಾಗ ನನ್ನನ್ನು ರಿಲೀವ್ ಮಾಡಿದರು. ಆಗ ಕೊಟ್ಟ ಹಣ ಅದು ಹೇಗೆ ಮುಗಿಯಿತೋ?'

'ಈಗೇನು ಮಾಡುತ್ತೀರಿ?'

'ಈಗಲೂ ಟ್ರಕ್ ಡ್ರೈವರ್ ಆಗಿದ್ದೇನೆ. ಮಿಲಿಟರಿಯಲ್ಲಿ ಅಲ್ಲ'.

'ಅವರು' ಮೂಡು ಬಂದಾಗೆಲ್ಲಾ ಅವನಿಗೆ ಕತೆ ಹೇಳುತ್ತಿದ್ದರು. ಎಲ್ಲಾ ಮಿಲಿಟರಿ ಕತೆಗಳೇ.

ಅವನು 'ಅವರ' ಪ್ರೀತಿಗೆ ಮನಸೋತು ಒಂದು ದಿನ ತಾಯಿಯಲ್ಲಿ ಕೇಳಿದ.

'ನನ್ನನ್ನು ಪಟೇಲರೇ ಎಂದು ಕರೆದು ಕತೆ ಹೇಳುತ್ತಾರಲ್ಲಮ್ಮ? ಅವರು ಯಾರು?'

'ಅವರು ನಿನಗೆ ಇಷ್ಟನಾ?'

'ಹ್ಞೂಂ. ಮಿಠಾಯಿ ತಿನ್ನಲು ದಿನಾ ಹಣ ಕೊಡ್ತಾರೆ'.

'ಅವರು ನಿನ್ನ ಚಿಕ್ಕಪ್ಪ. ನಾನು ಅವರನ್ನು ಮದುವೆಯಾಗುತ್ತೇನೆ. ಆಮೇಲೆ ಅವರು ನಿನ್ನ ಅಪ್ಪ'.

ಅವನಿಗೆ ಅತೀವ ಆಶ್ಚರ್ಯವಾಗಿತ್ತು.

'ನನಗೊಬ್ಬ ಅಪ್ಪ ಇದ್ದಾರಲ್ಲಮ್ಮ'.

'ಇದ್ದದ್ದು ಹೌದು. ಅವರು ನಮ್ಮ ಪಾಲಿಗೆ ಸತ್ತು ಹೋಗಿದ್ದಾರೆ'.

ಅವನು ವಾಸ್ತವಕ್ಕೆ ಬಂದ.

